ತೆಂಗಿಗೆ ತಗಲಿರುವ ಕರಿ ತಲೆ ಹುಳುವಿನ ರೋಗವನ್ನು ನಿಯಂತ್ರಿಸುಲು ಕೈಗೊಂಡಿರುವ ಕ್ರಮ.

443 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೆಂಗಿಗೆ ತಗುಲಿರುವ ಕರಿ ತಲೆ ಹುಳುವಿನ ರೋಗವನ್ನು ನಿಯಂತ್ರಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿ ಇಂತಹ ರೋಗ ಎಷ್ಟು ಪ್ರದೇಶದಲ್ಲಿ ಹರಡಿವೆ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಕಪ್ಪು ತಲೆ ಹುಳುವಿನ ಭಾದೆಯನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ರಾಜ್ಯದ 11 ಜಿಲ್ಲೆಗಳಲ್ಲಿ ಪ್ರತಿವರ್ಷ 46.50 ಲಕ್ಷ ಪರೋಪಜೀವಿಗಳನ್ನು ಅಭಿವೃದ್ಧಿ ಪಡಿಸಿ ಬಾಧೆಗೊಳಗಾದ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲು 50 ಪ್ರಯೋಗಾಲಯಗಳನ್ನು ತೆರೆಯಲಾಗಿದೆ.

2) ತೆಂಗು ಅಭಿವೃದ್ಧಿ ಮಂಡಳಿ ಸಹಾಯಧನದೊಂದಿಗೆ 3 ಬೃಹತ್ ಪ್ರಮಾಣದ ಪರೋಪ ಜೀವಿ ಪ್ರಯೋಗಾಲಯಗಳನ್ನು ತಿಪಟೂರು ಉಡುಪಿ ಮತ್ತು ಹೊಸದುರ್ಗಗಳಲ್ಲಿ ಸ್ಥಾಪಿಸಲಾಗಿದೆ.

3) ನಿರುದ್ಯೋಗಿ ಯುವಕರ ಆಶ್ರಯದಿಂದ ರಾಜ್ಯದಲ್ಲಿ 26.00ಲಕ್ಷ ಪರೋಪಜೀವಿ ಉತ್ಪಾದನೆ ಗುರಿಯಸಲುವಾಗಿ 130 ಖಾಸಗಿ ಪ್ರಯೋಗಾಲಯಗಳನ್ನು ತೆರೆಯಲಾಗಿದೆ.

4) ಜಿಲ್ಲಾ ಪರಿಷತ್ ಆಶ್ರಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಉಚಿತವಾಗಿ ಮತ್ತು ದೊಡ್ಡ ರೈತರಿಗೆ ಶೇಕಡ 50ರ ರಿಯಾಯಿತಿ ದರದಲ್ಲಿ ಕೀಟನಾಶಕವನ್ನು ಒದಗಿಸಲು 15.57 ಲಕ್ಷ ರೂ. ಒದಗಿಸಲಾಗಿದೆ.

5) 1991-92ನೇ ಸಾಲಿನಲ್ಲಿ ರಾಜ್ಯವಲಯದಲ್ಲಿ 28 ಪ್ರಯೋಗಾಲಯಗಳನ್ನು ತೆರೆಯಲು ರೂ 5.20 ಲಕ್ಷವನ್ನು ಒದಗಿಸಲಾಗಿದೆ. ವಾರ್ಷಿಕ 20 ಲಕ್ಷ ಪರೋಪಜೀವಿಗಳನ್ನು ಉತ್ಪಾದಿಸುವ ಗುರಿ ಇದೆ. ಭಾಧೆಗೊಳಗಾದ ಮರಗಳಿಗೆ ಉಚಿತವಾಗಿ ಕೀಟನಾಶಕ ಉಪಚರಿಸಲು ರೂ 11.00 ಲಕ್ಷಗಳನ್ನು ಒದಗಿಸಲಾಗಿದೆ.

ಆ) ಒಟ್ಟು 2450 ಹೆಕ್ಟೇರ್ ಪ್ರದೇಶವೆಂದು ಅಂದಾಜು ಮಾಡಲಾಗಿದೆ.

ರೈತರಿಗೆ ರಸಗೊಬ್ಬರ ಸರಿಯಾದ ಪ್ರಮಾಣದಲ್ಲಿ ದೊರಕದೆ ಇರುವ ಬಗ್ಗೆ

444 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರಿಗೆ ರಸಗೊಬ್ಬರ ಸರಿಯಾದ ಪ್ರಮಾಣದಲ್ಲಿ ದೊರಕದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಇಲ್ಲ, ರಾಜ್ಯದಲ್ಲಿ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರಗಳು ಸರಬರಾಜಾಗುತ್ತಿವೆ.